**ದಿನಾಂಕಃ 12-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಪಾಟೀ ಸವಾಲುಃ ಶ್ರೀ ಜಿ.ಎಸ್. ವಕೀಲರಿಂದ ಪ್ರತಿವಾದಿ ಪರವಾಗಿಃ-***

1 ನೇ ಪ್ರತಿವಾದಿ ನನ್ನ ತಾಯಿ, 2 ರಿಂದ 5 ನೇ ಪ್ರತಿವಾದಿಯರು ನನ್ನ ಸಹೋದರು. ಈ ದಾವೆಯನ್ನು ಪಾಲು ಕೇಳಿ ಹಾಕಿದ್ದೇನೆ. ದಾವಾ ಆಸ್ತಿಗಳ ವಿಸ್ತೀರ್ಣ, ಸರ್ವೆ ನಂಬರ್, ಚಕ್ ಬಂಧಿ ಮತ್ತು ತರಹೆ ಹೇಳಲಾಗುವುದಿಲ್ಲ. ದಾವಾ ಆಸ್ತಿಗಳು ನನ್ನ ಸಹೋದರರು ಸಂಪಾದಿಸಿದ ಆಸ್ತಿಗಳು ಎಂದರೆ ಸಾಕ್ಷಿಯು ತಂದೆ ಸಂಪಾದಿಸಿದ್ದು ಎನ್ನುತ್ತಾರೆ. 4 ನೇ ಪ್ರತಿವಾದಿ ಭೂ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ಒಕ್ಕಲುತನ ಮಾಡುತ್ತಾರೆಂದರೆ ಸರಿ. 5 ನೇ ಪ್ರತಿವಾದಿ ಚಾಲಕ ಕೆಲಸ ಮಾಡುತ್ತಾರೆಂದರೆ ಸರಿ. ನನ್ನ ಸಹೋದರರಿಗೆ ಅವರ ಸ್ವಂತ ಗಳಿಕೆ ಇದೆ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ಸಹೋದರರು ಖರೀಸಿದ ಆಸ್ತಿಗಳು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**